"ಎಲೊ ಎಲೋ ಲೋಫರ್! ನಾವು ಹೇಳಿಕೊಟ್ಟುದನ್ನು ನಮಗೇ ವಾಪಸು ಮಾಡುತ್ತಿದ್ದೀಯಲ್ಲ!"

"ಏನು ಹೇಳಿಕೊಟ್ಟಿದ್ದೀರಿ ಸ್ವಾಮಿ ನೀವು? ನಿಮ್ಮ ಚಾಕರಿ ಮಾಡುವುದಲ್ಲದೆ ಒಂದು ಸಂಧ್ಯಾವಂದನೆ ಮಾಡಕ್ಕೆ ಕೂಡ ಬರಲ್ಲ ನನಗೆ, ಇಷ್ಟು ವರ್ಷ ಕತ್ತೆ ಥರ ನನ್ನ ನೋಡ್ಕೊಂಡ್ರಿ. ಈಗ ನಿಮ್ಮ ತಂಗಿ ಮಗ ಪ್ರಾಯಕ್ಕೆ ಬರ್ತಿದ್ದಾನೆ, ಆದ್ದರಿಂದ ನನ್ನನ್ನ ಕಂಡ್ರೆ ಆಗಲ್ಲ, ಹೊರ ಹಾಕ್ತ ಇದ್ದೀರಿ. ಆದ್ರೆ ಒಂದು ವಿಚಾರ ನೆನ್ಪಿಡಿ – ಹೊರಹಾಕಿದರೆ ಮಠದೊಳಗೆ ಏನೆಲ್ಲ ಅವ್ಯವಹಾರ ನಡೀತಿದೆ ಎನ್ನೋದನ್ನ ಲಾವಣಿ ಕಟ್ಟಿ ಹಾಡ್ತೀನಿ. ಶಾರದಮ್ಮ, ಪಾರ್ವತಮ್ಮ, ರುಕ್ಮಾಬಾಯಿ ಎಲ್ಲಾ ಸಾಲು ಸಾಲಾಗಿ ಬರ್ತಾರೆ ಅದರಲ್ಲಿ. ನೀವು ಅಕ್ಕನ ಮಗ ಅನ್ನೋನು ನಿಜಕ್ಕೂ ಯಾರ ಮಗ ಅನ್ನೋದು ನನಗೆ ಗೊತ್ತಿದೆ."

"ಹೋಗಯ್ಯ ಹೋಗೋ, ಅದೇನು ಹರಕೋತೀಯೋ ಹರಕೋ. ಮರಳಿ ಮಠದೊಳಕ್ಕೆ ಕಾಲಿರಿಸಿದರೆ ಮಾತ್ರ ನಿನ್ನ ಕೈ ಕಾಲು ನೆಟ್ಟಗೆ ಇರಲ್ಲ, ಜಾಗ್ರತೆ! ಒಂದು ವಿಷಯ ತಿಳಕೋ. ಹೊರಹಾಕಲ್ಪಟ್ಟವನ ಮಾತನ್ನು ಯಾರೂ ನಂಬುವುದಿಲ್ಲ. ಬರೀ ಗುಲ್ಲು, ನಿದ್ದೆಗೇಡು. ಹೋಗಯ್ಯ ಬೇವಕೂಫ್, ಮುನಿವೆಂಕಟಪ್ಪ."

"ಗಳಕಂಠೇಶ್ವರ ಸ್ವಾಮಿ."

"ಗಳಕಂಠೇಶ್ವರ ನಿನ್ನಪ್ಪ. ನಾನೇ ಇರಿಸಿದ್ದು. ನೀನೀಗ ಮುನಿವೆಂಕಟಪ್ಪ. ಹುಟ್ಟುವಾಗ ಹೇಗಿದ್ಯೊ ಹಾಗೆ... ಅಲ್ಲಾ ಎಂಥಾ ಮೂರ್ಖನಯ್ಯಾ ನೀನು. ಒಂದು ವಿಷಯ ಹೇಳ್ತೇನೆ ಕೇಳು. ಏನು ಮಾಡುವುದಕ್ಕೂ ಒಂದು ಮೆಥಡ್ ಅಂತ ಇರುತ್ತೆ. ಅದು ಸರಿಯಾಗಿರಬೇಕು. ನಾನು ಮುದಿ ಸ್ವಾಮೀಜಿಯವರನ್ನು ಸಾಯುಜ್ಯಕ್ಕೆ ಕಳಿಸಿದ್ದು ಹೇಗೆ ಗೊತ್ತೇ ನಿನಗೆ?"

"... ..."

"ತಲೆದಿಂಬು. ಅದರಷ್ಟು ಸರಳ ಮತ್ತು ಸುಲಭ ವಿಧಾನ ಇನ್ನೊಂದಿಲ್ಲ."

"ಆದರೆ ಇಲ್ಲಿ ಯಾರೂ ತಲೆದಿಂಬು ಉಪಯೋಗಿಸಬಾರದು ಎಂಬ ನಿಯಮವಿದೆಯಲ್ಲ?"

"ಆ ನಿಯಮ ಮಾಡಿದ್ದು ನಾನೇ. ಮುದಿ ಸ್ವಾಮೀಜಿಯವರನ್ನು ಕಳಿಸಿದ ನಂತರ. ಯಾಕೆ ಎನ್ನುವುದು ಯಾರಿಗೂ ಗೊತ್ತಿಲ್ಲ. ಆರೋಗ್ಯದ ಕಾರಣಕ್ಕೆ ಎಂದುಕೊಂಡಿದ್ದಾರೆ ಫೂಲ್ಸ್. ನೌ ಗೆಟೌಟ್!"

★★★

ಮತ್ತೆ ಕೆಲವು ಕಾಲ ಮರಿಸ್ವಾಮಿ ಉರುಫ್ ಗಳಕಂಠೇಶ್ವರ ಸ್ವಾಮಿ ಉರುಫ್ ಮುನಿವೆಂಕಟಪ್ಪ ಮಠದ ಕಾಂಪೌಂಡಿನ ಹೊರಗಿನ ರಸ್ತೆಯಲ್ಲಿ ಗೋಳಾಡುತ್ತ, ಬಯ್ಯುತ್ತ, ಶಾಪ ಹಾಕುತ್ತ ಭಿಕ್ಷೆ ಬೇಡುತ್ತ ಇದ್ದ. ಎದುರಿನ ಅರಳಿ ಕಟ್ಟೆಯಲ್ಲಿ ಅವನ ಠಿಕಾಣಿ.

ದೊಣ್ಣೆ ತೆಗೆದು ಎಷ್ಟು ಓಡಿಸಿದರೂ ಎಲ್ಲೋ ಸ್ವಲ್ಪ ಮಾಯವಾಗಿ ಮತ್ತೆ ಬರುತ್ತಿದ್ದ. ಅವನಿಗೆ ಹುಚ್ಚು ಹಿಡಿದಿದೆ ಎಂಬ ಬಲವಾದ ವದಂತಿಯಿತ್ತು. ಅದಕ್ಕೆ ಸರಿ ಎಂಬಂತೆ ಅವನು ಯಾವಾಗಲೂ ತಲೆದಿಂಬೊಂದನ್ನು ಕಂಕುಳಲ್ಲಿ ಇರುಕಿಕೊಂಡು ಓಡಾಡುತ್ತಿದ್ದ. ನಂತರ ಒಂದು ದಿನ ಅವನು ಕಾಣೆಸದಾದ; ಅವನ ಜೊತೆ ಅವನ ತಲೆದಿಂಬು ಕೂಡ.

✿